681(633) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿರುವ ಸಣ್ಣ ಕೈಗಾರಿಕಾ ಘಟಕಗಳೆಷ್ಟು;

ಆ) ಸಣ್ಣ ಕೈಗಾರಿಕಾ ಪ್ರದೇಶ ಎಂದು ಘೋಷಿಸಿದ ಸ್ಥಳ ಮತ್ತು ಅವುಗಳ ವಿಸ್ತೀರ್ಣ ಎಷ್ಟು ಹಾಗೂ ಘೋಷಿತ ಕೈಗಾರಿಕಾ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ಘಟಕಗಳೆಷ್ಟು (ಪೂರ್ಣ ವಿವರ ನೀಡುವುದು);

ಇ) ಇರುವ ಕೈಗಾರಿಕಾ ಶೆಡ್‌ಗಳಲ್ಲಿ ಖಾಲಿ ಇರುವ ಶೆಡ್‌ಗಳ ಸಂಖ್ಯೆ ಎಷ್ಟು ಹಾಗೂ ಯಾವ ಕಾರಣಕ್ಕಾಗಿ ಅವುಗಳನ್ನು ಖಾಲಿ ಇರಿಸಲಾಗಿದೆ;

ಈ) ದೀರ್ಘ ಕಾಲದಿಂದ ಖಾಲಿ ಇರುವ ಶೆಡ್‌ಗಳ ನಿಯಮಗಳನ್ನು ನಡಿಲಿಸಿ ಮಂಜೂರು ಮಾಡಲು ಕ್ರಮ ಜರುಗಿಸಲಾಗುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದಿನಾಂಕ 31–3–2004ರಲ್ಲಿದ್ದಂತೆ 907 ಸಣ್ಣ ಕೈಗಾರಿಕೆಗಳು ಬೆಳ್ತಂಗಡಿ ತಾಲ್ಲೂಕಿನಲ್ಲಿ ನೋಂದಾಯಿಸಲ್ಪಟ್ಟಿವೆ.

ಆ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತವು ಬೆಳ್ತಂಗಡಿ ತಾಲ್ಲೂಕಿನಲ್ಲಿ ಸ್ಥಾಪಿಸಿರುವ ಕೈಗಾರಿಕಾ ವಸಾಹತುಗಳ ವಿವರಗಳು ಈ ಕೆಳಕಂಡಂತಿವೆ:

ಕೈ.ವ. ಹೆಸರು	ವಿಸ್ತೀರ್ಣ (ವಿವರಗಳಲ್ಲಿ)	ನಿರ್ಮಿಸಿರುವ ಶೆಡ್‌ಗಳ ಸಂಖ್ಯೆ ಸಂಖ್ಯೆ	ಹಂಚಿಕೆಯಾಗಿರುವ ಶೆಡ್ಡುಗಳ	ಖಾಲಿ ಶೆಡ್‌ಗಳ ಸಂಖ್ಯೆ
ಕಾತಿಬೆಟ್ಟ	0.90	10	6 (+1 ಕಛೇರಿ ಉಪಯೋಗಕ್ಕೆ)	3
	9.88	0	0	0

ಇ) ಒಟ್ಟು 3 ಸೂಪರ್ ಮಿನಿ ಶೆಡ್ಡುಗಳು ಖಾಲಿ ಇರುತ್ತವೆ. ಈ ಶೆಡ್ಡುಗಳನ್ನು ಡಾ: ಅಂಬೇಡ್ಕರ್ ಜನ್ಮಶತಾಬ್ದಿ ಯೋಜನೆಯಡಿ ನಿರ್ಮಿಸಲಾಗಿದ್ದು. ಈ ಶೆಡ್ಡುಗಳನ್ನು ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ ಮೀಸಲಿಡಲಾಗಿದೆ. ಮೇಲಿನ ಶೆಡ್ಡುಗಳನ್ನು ಹಂಚಿಕೆ ಮಾಡುವ ಸಂಬಂಧ ಅನೇಕ ಬಾರಿ ಜಾಹೀರಾತು ಹೊರಡಿಸಿದ್ದರೂ ಸಹ ಹಂಚಿಕೆಗಾಗಿ ಅರ್ಜಿಗಳು ಬಂದಿರುವುದಿಲ್ಲ.

ಈ) ಸಾಮಾನ್ಯವಾಗಿ ಶೆಡ್ಡುಗಳನ್ನು ಕಂತು–ಖರೀದಿ ಆಧಾರದಲ್ಲಿ ಹಂಚಿಕೆ ಮಾಡಲಾಗುತ್ತಿದ್ದು, ಬಹು ದಿನಗಳಿಂದಲೂ ಖಾಲಿ ಇರುವ ಶೆಡ್ಡುಗಳನ್ನು ಹಂಚಿಕೆ ಮಾಡುವ ಸಲುವಾಗಿ, ಶೆಡ್ಡುಗಳನ್ನು ಬಾಡಿಗೆ ಆಧಾರದಲ್ಲಿಯೂ ಸಹ ಹಂಚಿಕೆಗೆ ಲಭ್ಯ ಮಾಡಲಾಗಿದೆ.